## 37 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

### ಸಿ.ಸಿ. ನಂ. 5554/2015

ಪ್ರಾ.ಸಃ **7** ಚಾ.ಸಃ **6**

| | |
|---|---|
| ಸಾಕ್ಷಿದಾರರ ಹೆಸರು | ಮಧು |
| ತಂದೆಯ/ಗಂಡನ ಹೆಸರು | ಯೋಗಾನಂದ್ |
| ವಯಸ್ಸು | 38 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಿಳಾಸ | ಬೇಗೂರು,ಬೆಂಗಳೂರು. |
| ಪ್ರ ವ ಬೋ ದಿನಾಂಕ | 30.09.2022 |

ಮುಖ್ಯ ವಿಚಾರಣೆಃ ಹಿ.ಸ.ಸ. ಅ ರವರಿಂದಃ

ದಿ. 25.04.2014 ರಂದು ಶಿರಡಿ ಶೀಘ್ರ ದರ್ಶನವನ್ನು ಕೇವಲ 3,450/- ರೂ. ಗಳಿಗೆ ವಿಶೇಷ ರೈಲಿನಲ್ಲಿ ಮಾಡಿಸುವುದಾಗಿ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸಲಾಗಿತ್ತು. ಸದರಿ ಪ್ರಕಟಣೆಯನ್ನು ನೋಡಿ ನಾವು ಬಸವನಗುಡಿಯಲ್ಲಿರುವ ವಿದ್ಯಾ ಭಾರತಿ ಫೌಂಡೇಶನ್ ಕಚೇರಿಗೆ ಭೇಟಿ ನೀಡಿದಾಗ ಕಚೇರಿಯಲ್ಲಿ ಪದ್ಮಿನಿ ಮತ್ತು ರಂಜಿನಿ ಎಂಬುವರು ಇದ್ದರು, ಅವರು ಪತ್ರಿಕೆಯಲ್ಲಿ ಪ್ರಕಟಣೆ ನೀಡಿದಂತೆ ಶಿರಡಿಯಲ್ಲಿ ವಸತಿ ಮತ್ತು ದರ್ಶನ ಮಾಡಿಸುವುದಾಗಿ ಹೇಳಿದರು. ನಂತರ ನಾವು ಈ ಬಗ್ಗೆ ಸದರಿ ಫೌಂಡೇಶನ್ ನ ಮಾಲೀಕರಾದ ಅರುಣ್ ಕುಮಾರ್ ರವರಿಗೆ ಪೋನ್ ಮಾಡಿ ಖಚಿತ ಪಡಿಸಿಕೊಂಡು, ನಾನು, ನನ್ನ ಅಕ್ಕ ಮತ್ತು ನನ್ನ ಸ್ನೇಹಿತರು ಸೇರಿಕೊಂಡು ತಲಾ 3,450/- ರೂ.ಗಳಂತೆ ನೀಡಿ 9 ಟಿಕೇಟ್ ಗಳನ್ನು ಬುಕ್ ಮಾಡಿರುತ್ತೇವೆ. ಈ ಬಗ್ಗೆ ನಮಗೆ ಟ್ರಸ್ಟ್ ಹೆಸರಿನಲ್ಲಿ ರಶೀದಿಯನ್ನು ನೀಡಿರುತ್ತಾರೆ. ದಿನಾಂಕ 30.05.2014 ರಂದು ಬೆಳಗ್ಗೆ 07 ಗಂಟೆಗೆ ಬೆಂಗಳೂರಿನ ಕಂಟೋನ್ ಮೆಂಟ್ ರೈಲ್ವೆ ನಿಲ್ದಾಣದಿಂದ ನಮಗೆ ರೈಲಿನ ವ್ಯವಸ್ಥೆ ಇದೆ ಎಂದು ಹೇಳಿದ್ದು, ಆ ದಿನ ನಾವು 9 ಜನ ರೈಲು ನಿಲ್ದಾಣಕ್ಕೆ ಹೋಗಿದ್ದು, ಅಲ್ಲಿ ಆಯೋಜಕರು ಹೇಳಿದಂತೆ ಯಾವುದೇ ವಿಶೇಷ ರೈಲು ಇರಲಿಲ್ಲ, ಸುಮಾರು 3-4 ಗಂಟೆಗಳ ನಂತರ ನಾವು ಒಂದು ರೈಲಿನಲ್ಲಿ ಹತ್ತಿಕೊಂಡು ಹೋಗಿದ್ದು ಅಲ್ಲಿ ಆಯೋಜಕರು ನೀಡಿದ್ದ ಸೀಟ್ ನಂಬರ್ ಗಳಿಗೂ ರೈಲಿನಲ್ಲಿದ್ದ ಸೀಟ್ ಗಳಿಗೂ ಯಾವುದೇ ಹೊಂದಾಣಿಕೆ ಇರಲಿಲ್ಲ ಮತ್ತು ಟ್ರಸ್ಟ್ ವತಿಯಿಂದ ನಮಗೆ ಯಾವುದೇ ವ್ಯವಸ್ಥೆಗಳನ್ನು ಮಾಡಿಕೊಟ್ಟಿರುವುದಿಲ್ಲ. ದಿ. 31.05.2014 ರಂದು ಬೆಳಗ್ಗೆ 07 ಗಂಟೆಗೆ ತಲಪ ಬೇಕಾದ ರೈಲು ಮಧ್ಯಾಹ್ನ 04 ಗಂಟೆಗೆ ಶಿರಡಿಗೆ ತಲುಪಿದ್ದು, ಅಲ್ಲಿಯೂ ಸಹ ಆಯೋಜಕರು ನಮಗೆ ಯಾವುದೇ ವ್ಯವಸ್ಥೆಗಳನ್ನು ಮಾಡಿರುವುದಿಲ್ಲ, ಆದ್ದರಿಂದ ನಾವು ನಮ್ಮ ನಮ್ಮ ಖರ್ಚಿನಲ್ಲೆ ವಸತಿ

ಮತ್ತು ಊಟದ ವ್ಯವಸ್ಥೆಗಳನ್ನು ಮಾಡಿಕೊಂಡು ಬಂದಿರುತ್ತೇವೆ. ಇದೇ ರೀತಿ ಸುಮಾರು 180 ರಿಂದ 200 ಜನ ಸಹ ವಿದ್ಯಾ ಭಾರತಿ ಫೌಂಡೇಶನ್ ನಲ್ಲಿ ಟಿಕೇಟ್ ಬುಕ್ ಮಾಡಿರುತ್ತಾರೆ. ಆರೋಪಿ ಇದೇ ತರಃ ಎಲ್ಲರಿಂದಲೂ ಹಣ ಪಡೆದು, ಯಾವುದೇ ವ್ಯವಸ್ಥೆಗಳನ್ನು ಮಾಡದೇ ಮೋಸ ಮಾಡಿರುತ್ತಾರೆ. ಈ ಬಗ್ಗೆ ಆರೋಪಿತನ ವಿರುದ್ಧ ದೂರು ನೀಡಿದ್ದು, ಪೊಲೀಸರು ನಮ್ಮನ್ನು ವಿಚಾರಣೆ ಮಾಡಿರುತ್ತಾರೆ. ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಈಗ ನ್ಯಾಯಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

<u>ಪಾಟೀ ಸವಾಲುಃ ಶ್ರೀ ಕೆ.ಎನ್.ಬಿ ಆರೋಪಿ ಪರ ವಕೀಲರಿಂದಃ</u>

ಆರೋಪಿ ಪರ ಶ್ರೀ ಕೆ.ಎನ್.ಬಿ. ವಕೀಲರು ಪಾಟೀ ಸವಾಲಿಗೆ ಕಾಲವಕಾಶ ಕೇಳಿದ್ದು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ